ಕರ್ನಾಟಕ ಸರ್ಕಾರ

**ಸಂಖ್ಯೆ:** ಕಾಶಿಇ/HRMS/NPS Backlog/03/2020-21

ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ,
ಬೆಂಗಳೂರು, ದಿನಾಂಕ: **28/09/2021**

## ಚಾಲನಾ ಆದೇಶ

**ವಿಷಯ:** ಎನ್.ಪಿ.ಎಸ್ ಯೋಜನೆಯಡಿಯಲ್ಲಿ ಬರುವ ಕರ್ನಾಟಕ ಸರ್ಕಾರದ ನೌಕರರಿಗೆ ಟಯರ್-II ಖಾತೆ ತೆರೆಯುವ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಆಇ 141 ಪಿಇಎನ್ 2020 ಬೆಂಗಳೂರು, ದಿನಾಂಕ: 10/08/2021

*****

ರಾಜ್ಯ ಸರ್ಕಾರವು ದಿನಾಂಕ: 31/03/2006ರ ಸರ್ಕಾರಿ ಆದೇಶದಂತೆ ದಿನಾಂಕ: 01/04/2006 ರಂದು ಮತ್ತು ತದನಂತರ ರಾಜ್ಯ ಸರ್ಕಾರದ ಸೇವೆಗೆ ಸೇರುವ ಎಲ್ಲಾ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಕಡ್ಡಾಯಗೊಳಿಸಲಾಗಿದ್ದು, ಎನ್.ಪಿ.ಎಸ್ ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ಟಯರ್- I ಖಾತೆ ಹೊಂದುವುದು ಕಡ್ಡಾಯವಾಗಿದ್ದು, ಟಯರ್- I ಖಾತೆಯಲ್ಲಿ ನೌಕರನ ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇ.10ರಷ್ಟು ಹಾಗೂ ಸರ್ಕಾರದ ವಂತಿಗೆ ದಿನಾಂಕ: 01/04/2019ರಿಂದ ಶೇ.14ರಷ್ಟು ಭರಿಸಲಾಗುತ್ತಿದೆ. ಎನ್.ಪಿ.ಎಸ್ ಟಯರ್- I ನಲ್ಲಿ ಹೂಡಿಕೆ ಮಾಡಿದ ಮೊತ್ತವು 60/65 ವರ್ಷದ ವಯೋಮಿತಿಯವರೆಗೆ ಕೂಡಿಹಾಕಲಾಗುತ್ತದೆ. ಆದರೆ ಭಾಗಶ: ಹಿಂಪಡೆದುಕೊಳ್ಳುವಿಕೆಗೆ ಷರತ್ತುಬದ್ಧವಾಗಿ ಅನುಮತಿ ನೀಡಲಾಗುತ್ತಿದೆ.

ಪ್ರಸ್ತುತ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರು ಹೆಚ್ಚಿನ ಉಳಿತಾಯ ಮಾಡಲು ಇಚ್ಛಿಸಿದಲ್ಲಿ ಟಯರ್- II ಖಾತೆಯನ್ನು ತೆರೆಯಲು ಅನುಮತಿಸಿದ್ದು, ತತ್ಸಂಬಂಧ ಹೊರಡಿಸಲಾಗಿರುವ ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ,**

1. ಪ್ರಾದೇಶಿಕ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಕಲ್ಬುರ್ಗಿ ಮತ್ತು ಶಿವಮೊಗ್ಗ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1. ಜಂಟಿನಿರ್ದೇಶಕರು, ಎನ್.ಪಿ.ಎಸ್ ಘಟಕ, 5ನೇ ಮಹಡಿ, ಕೆ.ಪಿ.ಸಿ.ಎಲ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-01 – ಮಾಹಿತಿಗಾಗಿ.
2. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.

HRMS

NPS Beg

(Returned)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎನ್.ಪಿ.ಎಸ್. ಯೋಜನೆಯಡಿಯಲ್ಲಿ ಬರುವ ಕರ್ನಾಟಕ ಸರ್ಕಾರದ ನೌಕರರಿಗೆ ಟಯರ್-II ಖಾತೆ ತೆರೆಯುವ ಕುರಿತು.

- - -

ಓದಲಾಗಿದೆ:

(1) ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 04 ಪಿಇಟಿ 2005, ದಿನಾಂಕ: 31.03.2006.

(2) ನೂತನ ಪಿಂಚಣಿ ಯೋಜನೆ ಟ್ರಸ್ಟ್ ರವರ ಸುತ್ತೋಲೆ ಸಂಖ್ಯೆ: NPST/2015/001, ದಿನಾಂಕ: 08.12.2015.

(3) ಖಜಾನೆ ಆಯುಕ್ತರ ಪತ್ರ ಸಂಖ್ಯೆ: DOT/NPS0ADM (GLC)4/2020, ದಿನಾಂಕ: 03.10.2020.

**ಪ್ರಸ್ತಾವನೆ:**

ರಾಜ್ಯ ಸರ್ಕಾರವು ಓದಲಾದ (1)ರ ಸರ್ಕಾರದ ಆದೇಶದಂತೆ ದಿನಾಂಕ: 01.04.2006ರಂದು ಮತ್ತು ತದನಂತರ ರಾಜ್ಯ ಸರ್ಕಾರದ ಸೇವೆಗೆ ಸೇರುವ ಎಲ್ಲಾ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಕಡ್ಡಾಯಗೊಳಿಸಲಾಗಿದೆ ಹಾಗೂ ಎನ್.ಪಿ.ಎಸ್. ಯೋಜನೆಯಡಿ ಬರುವ ಸರ್ಕಾರಿ ನೌಕರರಿಗೆ ಟಯರ್-I ಖಾತೆ ಹೊಂದುವುದು ಕಡ್ಡಾಯವಾಗಿದ್ದು, ಟಯರ್-I ಖಾತೆಯಲ್ಲಿ ನೌಕರನ ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇ.10ರಷ್ಟು ಹಾಗೂ ಸರ್ಕಾರದ ವಂತಿಗೆ ದಿನಾಂಕ: 01.04.2019ರಿಂದ ಶೇ. 14ರಷ್ಟು ಭರಿಸಲಾಗುತ್ತಿದೆ (ಸರ್ಕಾರದ ವಂತಿಗೆ ದಿನಾಂಕ: 01.04.2006 ರಿಂದ 31.03.2019ರವರೆಗೆ ಶೇ.10ರಷ್ಟು). ಎನ್.ಪಿ.ಎಸ್. ಟಯರ್-I ನಲ್ಲಿ ಹೂಡಿಕೆ ಮಾಡಿದ ಮೊತ್ತವು 60/65 ವರ್ಷದ ವಯೋಮಿತಿಯವರೆಗೆ ಕೂಡಿಹಾಕಲಾಗುತ್ತದೆ (locked in). ಆದರೆ ಭಾಗಶ: ಹಿಂಪಡೆದುಕೊಳ್ಳುವಿಕೆಗೆ ಷರತ್ತುಬದ್ಧವಾಗಿ ಅನುಮತಿ ನೀಡಲಾಗುತ್ತಿದೆ.

hrms section

ಮೇಲೆ ಓದಲಾದ (3)ರಲ್ಲಿ ಖಜಾನೆ ಆಯುಕ್ತರು ಎನ್.ಪಿ.ಎಸ್. ಯೋಜನೆಯಡಿಯಲ್ಲಿ ಬರುವ ಕರ್ನಾಟಕ ಸರ್ಕಾರದ ನೌಕರರಿಗೆ ಟಯರ್-II ಖಾತೆ ತೆರೆಯಲು ಅನುಮತಿ ಕೋರಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 141 ಪಿಇಎನ್ 2020,**
**ಬೆಂಗಳೂರು, ದಿನಾಂಕ: 10.08.2021.**

ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರು ಹೆಚ್ಚಿನ ಉಳಿತಾಯ ಮಾಡಲು ಇಚ್ಛಿಸಿದಲ್ಲಿ ಟಯರ್-II ಖಾತೆಯನ್ನು ತೆರೆಯಲು ಅನುಮತಿಸಿದೆ. ಈ ಖಾತೆಗೆ ನೌಕರರ ಸ್ವಯಂ ಕೊಡುಗೆ (voluntary contribution) ಅನ್ನು ನೌಕರರೇ ಜಮೆ ಮಾಡಬೇಕಾಗಿರುತ್ತದೆ. ಸದರಿ ಜಮೆಯನ್ನು ನೌಕರರ ವೇತನದಿಂದ ಕಟಾಯಿಸಲಾಗುವುದಿಲ್ಲ. ನೌಕರರು ಯಾವ ಸಮಯದಲ್ಲಿ ಬೇಕಾದರೂ ಸದರಿ ಮೊತ್ತವನ್ನು ಹಿಂಪಡೆಯಬಹುದಾಗಿರುತ್ತದೆ. ಈ ಖಾತೆಯಲ್ಲಿ ಹೂಡಿಕೆ ಮಾಡುವ ಮೊತ್ತಕ್ಕೆ

ಸೆಕ್ಷನ್ 80(ಸಿ)ರಡಿ ಆದಾಯ ತೆರಿಗೆಯ ವಿನಾಯಿತಿಯಿದೆ. ನೌಕರರು ಈ ಖಾತೆಯಲ್ಲಿ ಜಮೆ ಮಾಡುವ ಮೊತ್ತದ ಪಿಂಚಣಿ ನಿಧಿ ವ್ಯವಸ್ಥಾಪಕರ (Pension fund managers) ಹೂಡಿಕೆಯನ್ನು ಸ್ವತಃ ನೌಕರರೇ ನಿರ್ಧರಿಸಬೇಕಿರುತ್ತದೆ ಹಾಗೂ ಟಯರ್-II ಖಾತೆಯ ನಿರ್ವಹಣೆಗೆ ತಗಲುವ ಸೇವಾ ಶುಲ್ಕದ ವೆಚ್ಚವನ್ನು ಸಹ ನೌಕರರು ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿ - ರಾಷ್ಟ್ರೀಯ ಭದ್ರತಾ ಠೇವಣಿ ನಿಯಮಿತ (CRA-NSDL) ರವರಿಗೆ ಪಾವತಿಸಬೇಕಿರುತ್ತದೆ. ಸದರಿ ಟಯರ್-II ಖಾತೆಯ ನಿರ್ವಹಣೆಯು ಸಂಪೂರ್ಣವಾಗಿ ನೌಕರರದೇ ಆಗಿರುತ್ತದೆ ಹಾಗೂ ಪಿಂಚಣಿ ನಿಧಿ ನಿಯಂತ್ರಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (PFRDA) ರವರ ಆಯಾ ಸಮಯದ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಈ ಖಾತೆಯ ನೌಕರರ ವಂತಿಗೆಗೆ ಯಾವುದೇ ಸರ್ಕಾರಿ ವಂತಿಗೆ ಪಾವತಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕುಮುಟಾ ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ).

10/08/2021

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಎ&ಇ)/(ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
5. ಆಯುಕ್ತರು, ಖಜಾನೆ ಆಯುಕ್ತರ ಕಾರ್ಯಾಲಯ, ಕೆ.ಪಿ.ಸಿ.ಎಲ್. ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು - 560001.
6. ಎಲ್ಲಾ ಇಲಾಖಾ ಮುಖ್ಯಸ್ಥರು.
7. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
8. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
13. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

14. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
15. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
16. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
17. ಅಧ್ಯಕ್ಷರು, ಕರ್ನಾಟಕ ರಾಜ್ಯ ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರ ಸಂಘ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ.
19. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 1, 5 ಹಾಗೂ 10 ರಿಂದ 13ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ)

www.finance.karnataka.gov.in